ಈರಣ್ಣ ಐ ದವಡಿ, ಹಳ್ಳದಕೇರಿ
ಮಹಿಳಾ ಮೀಸಲಾತಿ ಬಗ್ಗೆ ಗಂಡಸರೇಕೆ ಹೋರಾಡುತ್ತಿದ್ದಾರೆ?



ಏಕೆಂದರೆ ಹೋರಾಡುವುದಿಲ್ಲವೆಂದರೆ ಮಹಿಳೆಯರು ಪುರುಷರಿಂದ ದೂರ ಹೊರಡುತ್ತಿದ್ದಾರೆ.

ಸುಲೋಚನ ಜೆ. ರಾವ್, ಬೆಂಗಳೂರು
ನಾನು ಕನ್ನಡ ಕಸ್ತೂರಿಯ ಕಂಪನ್ನು ನಾಲ್ಕೂ ದಿಕ್ಕಿಗೆ ಪಸರಿಸಬೇಕೆಂದಿದ್ದೇನೆ. ಎಲ್ಲಿಂದ, ಹೇಗೆ ಪ್ರಾರಂಭಿಸಲಿ?
'ಕನ್ನಡ ಓರಾಟ ಸಂಘ'ಗಳ ಮುಖ್ಯಸ್ಥರು 'ಹೋರಾಟ' ಎಂದು ಉಚ್ಚರಿಸುವಂತೆ ಮಾಡುವುದರಿಂದ.

ನಾರಾಯಣ ಯಾಜಿ, ಶಿರಾಲಿ
ಹುಟ್ಟುಹಬ್ಬ ಸಂತಸದ್ದು, ಪಾಯಸ ಓಕೆ. ಶ್ರಾದ್ಧ ದುಃಖಕರ. ಅಂದೂ ಪಾಯಸ ಯಾಕೆ?
'ಆತ್ಮ'ತೃಪ್ತಿಗಾಗಿ.

ಕೆ.ವಿ. ಶಿವಕುಮಾರ್ ಕಾಳೀಹುಂಡಿ
ಹುಡುಗಿಯರು ಮೌನವಾಗಿರುವುದು ಯಾವಾಗ?



ಫೇಷಿಯಲ್ ಮಾಡಿಸಿಕೊಳ್ಳುವಾಗ.

ಎಚ್.ವಿ. ಶ್ರೀಧರ, ಬೆಂಗಳೂರು
ಜರ್ಮನಿಯಲ್ಲಿ ವಿದ್ಯಾಭ್ಯಾಸ ಮಾಡಬೇಕಾದರೆ ಜರ್ಮನ್ ಕಲಿಯುವುದು ಕಡ್ಡಾಯ. ಕರ್ನಾಟಕದಲ್ಲೇಕೆ ಕನ್ನಡ ಕಡ್ಡಾಯವಲ್ಲ?
ಜರ್ಮನರ ನಿಶ್ಚಯ ಬಂಡೆ, ಕನ್ನಡಿಗರ ನಿಶ್ಚಯ ಉಸುಕು ಆದ್ದರಿಂದ.

ಗಣೇಶ ಎಂ. ಪೈ, ಬೆಂಗಳೂರು
ಕಾಲಾತೀತ ಮಾತುಗಾರರ ಬಳಿ ಸಿಲುಕಿ ವಿಲವಿಲ ಒದ್ದಾಡುತ್ತಿದ್ದೇನೆ. ಹೇಗೆ ಹೊರಬರಲಿ?
ವಜ್ರವನ್ನು ವಜ್ರದಿಂದಲೇ ಕತ್ತರಿಸಬೇಕು. ನೀವೇ ಕೊರೆಯಲಾರಂಭಿಸಿ.

ಭಾರತಿ ಮಾನಗೆ, ಹೊನ್ನಾವರ
ಪ್ರಶಸ್ತಿಗೆ ಬೆಲೆ ಬರುವುದು ಯಾವಾಗ?
ಲಾಬಿ ಮಾಡುವವರೊಡನೆ 'ಪ್ರಶಸ್ತಿಪ್ರದಾನ ಮಂಡಳಿ' ವ್ಯಾಪಾರಕ್ಕಿಳಿದಾಗ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಪ್ರತಿಯೊಬ್ಬರೂ ಹುಟ್ಟುಹಬ್ಬವನ್ನು ಹೇಗೆ ಆಚರಿಸಬೇಕು ಸಾರ್?
ಇತರರಲ್ಲಿಯೂ ಬದುಕಿನ ಉತ್ಸಾಹ ಹೆಚ್ಚುವ ಹಾಗೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಮನುಷ್ಯರು ಪ್ರಾಣಿಗಳಂತೆಯೂ, ಪ್ರಾಣಿಗಳು ಮನುಷ್ಯರಂತೆಯೂ ಏಕೆ ಬದಲಾಗುತ್ತಿದ್ದಾರೆ?
ಪ್ರಾಣಿಗಳದು ಸಬ್ಕಾ ಸಾತ್ ಸಬ್ಕಾ ವಿಕಾಸ್; ಮನುಷ್ಯರದು ಶಿಲಾಯುಗದ 'ಸ್ಟಾರ್ಟಪ್' ಯೋಜನೆಗಳಾಗಿವೆಯಂತೆ.

ರಮೇಶ್, ಹನುಮನಾಳು
ಇಲ್ಲೊಬ್ಬಳು ನನ್ನನ್ನು ನೋಡಬೇಕಂತೆ. ಏನು ಮಾಡಲಿ ರಾಮ್?
ಇನ್ನಾದರೂ ನೋಡಲು ಆಗುವಂತೆ ಇರಿ.

ಹಾಡ್ಯ ಬ. ಜಯಾನಂದ, ಮೈಸೂರು
ರಾಜಕಾರಣಿಯ ಕಣ್ಣಿಗೆ, ಹೊಟ್ಟೆಗೆ ಗುದ್ದಿದರೆ ಎದೆನೋವು ಎಂದು ಆಸ್ಪತ್ರೆಗೆ ಸೇರುವುದೇಕೆ?
ಎಲ್ಲಕ್ಕೂ ಹೈಕಮಾಂಡನ್ನೇ ಹೊಣೆ ಮಾಡುವ ರಾಜಕೀಯ ಬುದ್ಧಿ. ಎದೆ ಶರೀರದ ಹೈಕಮಾಂಡ್.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಕೆಲವರು ಸಂಭ್ರಮದಲ್ಲಿದ್ದರೂ ಸಂಭ್ರಮಿಸುವುದಿಲ್ಲವೇಕೆ?
ಗೊತ್ತಾದರೆ ಐಟಿ/ಇಡಿ/ಸಿಬಿಐ/ಬಂಧು/ಭಿಕ್ಷುಕರಿಂದ ರೈಡ್ ಆದೀತೆಂಬ ಭಯ.

ಎಚ್.ಆರ್. ದೇಸಾಯಿ, ರಾಯಚೂರು
'ಸುಧಾ'ಳಿಗೆ ಗುರುವಾರವೇ ಏಕೆ ಪ್ರಸವ?
ಎರಡು ದಿನ ಹಿಂದೆ ಮಂಗಳವಾಗಿ, ಹಿಂದಿನ ದಿನ ಬುಧರು ಆಶೀರ್ವದಿಸಿ, ಮರುದಿನ ಶುಕ್ರವಾಗುವುದರಿಂದ.

## ಬಹುಮಾನಿತ ಪ್ರಶ್ನೆ

ಎಚ್.ಕೆ. ವಿಜಯ್‌ಕುಮಾರ್ ರಾಯಚೂರು
ಉಗುರಿನ ಬಗ್ಗೆಯೂ ನೇಯ್ಲ್ ಆರ್ಟ್, ಅದಕ್ಕೊಂದು ಅಕಾಡೆಮಿ, 18 ಕೋರ್ಸ್. ಇನ್ನಾವುದರಲ್ಲಿ ಆರ್ಟ್ ಬಾಕಿಯಿದೆ ಗುರುವೆ?
ಗೆರಿಬಾಲ್ಡಿ(ಅಲ್ಲಲ್ಲಿ ಸಾಲುಕೂದಲಿರುವ) ತಲೆಗಳ 'ಬಾಲ್ಡ್ ಗಾರ್ಡನಿಂಗ್' ಕಲೆ.

ವ. ಉಮೇಶ್ ಕಾರಂತ್, ಮಂಗಳೂರು
'ಪ್ರೀತಿ' ಶಬ್ದಾರ್ಥ ವ್ಯಾಪ್ತಿ ತಿಳಿಸುವಿರಾ.....?
ಕರುಳಬಳ್ಳಿಯಲ್ಲಿ ಆರಂಭವಾಗಿ ಕುರುಳ ಮೇಲೆ ಮಲಗಿಸುವವರೆಗೆ ಅತ್ಯವಶ್ಯವಾದ ಭಾವ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಹಿಂದೆ ಆಸ್ತಿ ಕಡಿಮೆ ಇದ್ದರೂ ಮಕ್ಕಳು ಹೆಚ್ಚು ಇದ್ದರು. ಈಗ ಆಸ್ತಿ ಹೆಚ್ಚು ಇದ್ದರೂ ಮಕ್ಕಳು ಕಡಿಮೆ ಇದ್ದಾರಲ್ಲಾ...?
ನಿಮ್ಮ ಪ್ರಶ್ನೆಯಲ್ಲೇ ಉತ್ತರವಿದೆ. ಕಡಿಮೆ ಮಕ್ಕಳು ಇರುವುದರಿಂದಲೇ ಆಸ್ತಿ ಹೆಚ್ಚು ಇರುವುದು.

ವಿ. ಹಮೀದ್, ವಿಟ್ಲ
ಗೃಹಸ್ಥನಿಗೂ, ಬ್ರಹ್ಮಚಾರಿಗೂ ಇರುವ ವ್ಯತ್ಯಾಸವೇನು?



ಬ್ರಹ್ಮಚಾರಿ ಕಾಡಾನೆ; ಗೃಹಸ್ಥ ಸರ್ಕಸ್ ಆನೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
'ಹೆಣ್ಣು ಸಂಸಾರದ ಕಣ್ಣು' ಅಂತಾರಲ್ಲ, ಸೊಸೆಯಂದಿರನ್ನೂ ಸೇರಿಸಬಹುದೆ?
ಇತರರು ಮೂಗು ತೂರಿಸದಿದ್ದರೆ, ಬಾಯಿ ಮಾಡದಿದ್ದರೆ, ಸೇರಿಸಬಹುದು.

ವಿಜಯ ಬಿದರಹಳ್ಳಿ, ಹಿರೇಹಡಗಲಿ
ಹಕ್ಕು ಮತ್ತು ಜವಾಬ್ದಾರಿಗಳ ನಡುವಿನ ವ್ಯತ್ಯಾಸವೇನು?
ಮತ ಹಾಕುವುದು ನಮ್ಮ ಹಕ್ಕು; ವಿವೇಚನೆಯಿಂದ ಮತ ಹಾಕುವುದು ನಮ್ಮ ಜವಾಬ್ದಾರಿ.

■ ರಾಮ್